ದಿನಾಂಕಃ 10.03.2026.

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯ್ತು.

<u>**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಎಂ ವಕೀಲರಿಂದಃ-**</u>

1. ನನ್ನ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ಗೊತ್ತು. ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನು ಕೊಟ್ಟಿರುತ್ತೇನೆ. ನಾನು 6 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಆರೋಪಿ ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ಆರೋಪಿಯ ಜೆ ಸಿ ಬಿ ಇದ್ದು, ನಾನು ನಮ್ಮ ಕೆಲಸಕ್ಕೆ ಕರೆಸಿದ್ದು, ಆ ರೀತಿ 2016 ರಿಂದ ಪರಿಚಯ ಎಂದು ನುಡಿಯುತ್ತಾರೆ. ಆರೋಪಿ ನನ್ನ ಬಳಿ ಎರಡು ಬಾರಿ ವ್ಯವಹಾರ ಮಾಡಿದ್ದಾರೆ. ಆ ರೀತಿ ಯಾವಾಗ ಆರೋಪಿ ವ್ಯವಹಾರ ಮಾಡಿದ್ದಾರೆ ಎಂದರೆ ಸಾಕ್ಷಿ 2017 ರಲ್ಲಿ ಹಣ ಪಡೆದಿದ್ದು, ತೀರಿಸಿ ನಂತರ 2018 ರಲ್ಲಿ ಹಣ ಪಡೆದಿದ್ದಾರೆ ಎಂದು ನುಡಿಯುತ್ತಾರೆ.

2. ಆರೋಪಿ ಶುಂಠಿ ವ್ಯವಹಾರ ಮಾಡುತ್ತಿರುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿಲ್ಲ. ಆರೋಪಿ ಯಾವತ್ತೂ ಶುಂಠಿ ವ್ಯವಹಾರ ಮಾಡಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವಾಗ ನಿಮ್ಮ ಬಳಿ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದರೆ ಸಾಕ್ಷಿ ದಿಃ 10.03.2018 ರಂದು ಶುಂಠಿ ವ್ಯವಹಾರ ಮಾಡಿ ಸಾಲ ಮಾಡಿದ್ದೇನೆ ಎಂದು 10 ಲಕ್ಷ ಹಣ ಪಡೆದಿದ್ದು, ಆ ರೀತಿ ಪಡೆಯುವ 1 ವಾರದ ಮುಂಚೆ ನನ್ನ ಬಳಿ ಹಣ ಪಡೆದಿದ್ದಾರೆ. ಆರೋಪಿಗೆ ಆ ರೀತಿಯ ಯಾವುದೇ ಹಣದ ತೊಂದರೆ ಇಲ್ಲದಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಆ ದಿನ ಹಣ ಪಡೆಯಲು ಆರೋಪಿ ಒಬ್ಬರೇ ಬಂದಿದ್ದರು. ಆ ರೀತಿ ನಮ್ಮ ಮನೆಗೆ ಬಂದು ಹಣ ಪಡೆದಿರುತ್ತಾರೆ. ನಾನು ಅವರಿಗೆ 10 ಲಕ್ಷ ಹಣ ಕೊಟ್ಟಿರುತ್ತೇನೆ. ಆ ರೀತಿ 10 ಲಕ್ಷ ವ್ಯವಹಾರ ಮಾಡಬೇಕಾದರೆ ಕರಾರು ಮುಖಾಂತರ ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಹಿಂದೆ

ನನ್ನ ಬಳಿ ವ್ಯವಹಾರ ಮಾಡಿದ್ದ ಕಾರಣ ಮತ್ತು ಪರಿಚಯ ಇದ್ದ ಕಾರಣ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದಾರೆ, ನೀಡಲಾಗಿದೆ)**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.**

**ಓ ಹೇ ಕೇ ಸ ಇದೆ.**

**ಹಿರಿಯ ವ್ಯವಹಾರ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಶಿಕಾರಿಪುರ.**